## ಮಿಸ್ ಸ್ಟಾರ್ ಯುನಿವರ್ಸ್!

ಕಳೆದ ನವೆಂಬರ್‌ನಲ್ಲಿ ನಡೆದ ವಿಶ್ವಸುಂದರಿ ಸ್ಪರ್ಧೆಯಲ್ಲಿ ಸೌಂದರ್ಯ, ಫಿಟ್‌ನೆಸ್, ಮೌಖಿಕ ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಗಳಿಸಿ ಸಿಮ್ರನ್ 'ಮಿಸ್‌ಲೇಡಿ ಸ್ಟಾರ್ ಯುನಿವರ್ಸ್' ಆಗಿದ್ದಾರೆ.

ಮದುವೆಯಾದ ಬಳಿಕ ಸೌಂದರ್ಯ ಮೊದಲಿನ ಹಾಗೆ ಉಳಿಯುವುದಿಲ್ಲ ಎಂಬುವವರ ಅಭಿಪ್ರಾಯವನ್ನು ಸುಳ್ಳಾಗಿಸಿದ ಸಿಮ್ರನ್ ಮದುವೆಯಾಗಿ ಇಬ್ಬರು ಮಕ್ಕಳಾದ ಬಳಿಕ ಸೌಂದರ್ಯಸ್ಪರ್ಧೆಯಲ್ಲಿ ಭಾಗವಹಿಸಿ ಗೆಲುವು ಸಾಧಿಸಿದ್ದು ವಿಶೇಷ.

ಈ ಸ್ಪರ್ಧೆಯಲ್ಲಿ ಅಮೆರಿಕ, ಇಂಗ್ಲೆಂಡ್, ಉಕ್ರೇನ್, ಬೆಲ್ಜಿಯಂ, ಜರ್ಮನಿ, ಸ್ಪೈನ್, ಫ್ರಾನ್ಸ್, ಪೋರ್ಚುಗಲ್ ಸೇರಿದಂತೆ ವಿಶ್ವದ ಒಟ್ಟು 24 ರಾಷ್ಟ್ರಗಳ ಸುಂದರಿಯರು ಭಾಗವಹಿಸಿದ್ದರು.

ಸಿಮ್ರನ್ ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿ 'ಸುಂದರಿ' ಎಂಬ ಪಟ್ಟ ಪಡೆದದ್ದು ಇದೇ ಮೊದಲಲ್ಲ. ಈ ಹಿಂದೆ ಭಾರತದಲ್ಲಿ ನಡೆದ 'ಮಿಸ್ ಇಂಡಿಯಾ' ಸೌಂದರ್ಯ ಸ್ಪರ್ಧೆಯಲ್ಲಿ ರನ್ನರ್ ಅಪ್ ಗಳಿಸಿದ್ದರು. ಜ್ಯುವೆಲ್ಲರಿ ಬ್ರ್ಯಾಂಡ್, ಸಲೂನ್, ಕಿರುಚಿತ್ರಗಳಲ್ಲೂ ಮಾಡೆಲಿಂಗ್ ಆದ ಹಿನ್ನೆಲೆಯೂ ಇವರಿಗಿದೆ.

'ಮಾಡೆಲಿಂಗ್ ಮಾಡ್ತಿದ್ದೆ. ಫ್ಯಾಬ್ರಿಕ್ ಕಂಪೆನಿ, ಜ್ಯುವೆಲ್ಲರಿ ಕಂಪನಿಗಳ ಜಾಹೀರಾತುಗಳಲ್ಲಿ ಮಾಡೆಲಿಂಗ್ ಮಾಡಿದ್ದೆ. 'ಮೇರಕಿ ಸಲೂನ್' ಎಂಬ ವಿಶ್ವದಾದ್ಯಂತ ಇರುವ ಬ್ರ್ಯಾಂಡ್ ಕಂಪನಿಯವರು ಪೋರ್ಚುಗಲ್‌ನಲ್ಲಿ ನಡೆಯುವ ಮಿಸ್ ಯುನಿವರ್ಸ್ ಬ್ಯೂಟಿ ಸ್ಪರ್ಧೆಯಲ್ಲಿ ಭಾಗವಹಿಸಲು ಸೂಚಿಸಿದರು. ನವೆಂಬರ್ 2018ನಲ್ಲಿ ನಡೆದ ವಿಶ್ವಸುಂದರಿ ಸ್ಪರ್ಧೆಯಲ್ಲಿ ಭಾಗವಹಿಸಿ ಗೆಲುವು ಸಾಧಿಸಿದೆ' ಎನ್ನುತ್ತಾರೆ ಬೆಂಗಳೂರು ಮೂಲದ 37ರ ಹರೆಯದ ಸಿಮ್ರನ್.




ಸೌಂದರ್ಯ ಕಿರೀಟ ಧರಿಸಿದ ಸಿಮ್ರನ್

ನಾನು ಓದಿದ್ದು ಕಂಪ್ಯೂಟರ್ ಸೈನ್ಸ್ ಪದವಿ. ಸಾಫ್ಟ್‌ವೇರ್ ಕಂಪನಿಯಲ್ಲಿ ಐದು ವರ್ಷ ಕೆಲಸವನ್ನೂ ಮಾಡಿದ ಬಳಿಕ ವೃತ್ತಿಗೆ ಗುಡ್‌ಬೈ ಹೇಳಿ ಪೂರ್ಣ ಪ್ರಮಾಣದಲ್ಲಿ ಕಥಕ್ ನೃತ್ಯಕ್ಕೇ ಆತುಕೊಂಡಿದ್ದೇನೆ.

◆ **ನಿಮ್ಮ ನೃತ್ಯ ಬದುಕಿನ ಮಹತ್ವದ ತಿರುವುಗಳೇನು?**

ಅದು 2005ನೇ ಇಸವಿ. ಬೆಂಗಳೂರಿನ ಕೋರಮಂಗಲದಲ್ಲಿರುವ ನ್ಯಾಷನಲ್ ಗೇಮ್ಸ್ ವಿಲೇಜ್ ಕ್ಯಾಂಪಸ್‌ನಲ್ಲಿ ಭಾರತದ 'ಕಥಕ್ ಭೀಷ್ಮ' ಪಂ. ಬಿರ್ಜು ಮಹಾರಾಜ್ ಅವರ ನೃತ್ಯಕಾರ್ಯಕ್ರಮವಿತ್ತು. ಕಾರ್ಯಕ್ರಮದ ಬಳಿಕ ನನ್ನ ಗುರು ಮುರಾರಿ, ಬಿರ್ಜು ಮಹಾರಾಜ್ ಅವರಿಗೆ ನನ್ನನ್ನು ಪರಿಚಯಿಸಿದರು. ಆದರೆ ಅದಕ್ಕೂ ಮೊದಲೇ ಬಿರ್ಜು ಮಹಾರಾಜ್ ಅವರು ದೇಶ ವಿದೇಶಗಳ ಪ್ರತಿಷ್ಠಿತ ವೇದಿಕೆಗಳಲ್ಲಿ ನಾನು ನೀಡಿದ ಅನೇಕ ನೃತ್ಯ ಕಾರ್ಯಕ್ರಮಗಳನ್ನು ನೋಡಿದ್ದರು. ಪಂ. ಬಿರ್ಜು ಮಹಾರಾಜ್ ನನ್ನ ಹವ್ಯಾಸ ಮತ್ತು ವೃತ್ತಿಯ ಬಗ್ಗೆ ಕೇಳಿದರು. 'ನಾನು ಸಾಫ್ಟ್‌ವೇರ್ ಎಂಜಿನಿಯರ್, ಪ್ರವೃತ್ತಿ ಮಾತ್ರ ಕಥಕ್' ಎಂದೆ. 'ಎಂಜಿನಿಯರ್, ವೈದ್ಯ ವೃತ್ತಿಯಲ್ಲಿ ಸಾಕಷ್ಟು ಜನ ಇದ್ದಾರೆ. ಉತ್ತಮ ಕಥಕ್ ಕಲಾವಿದೆಯರು ಸಿಗುವುದು ವಿರಳ. ಹೀಗಾಗಿ ಪೂರ್ಣ ಪ್ರಮಾಣದಲ್ಲಿ ಕಥಕ್‌ನಲ್ಲೇ ತೊಡಗಿಕೊ' ಎಂದರು. ಅವರ ಒಂದೇ ಮಾತು ನನ್ನ ವೃತ್ತಿ ಜೀವನದಲ್ಲಿ ಮಹತ್ತರ ತಿರುವು ಪಡೆಯಿತು.

◆ **ಪಂ. ಬಿರ್ಜು ಮಹಾರಾಜ್ ಅವರೊಂದಿಗಿನ ಒಡನಾಟದ ಬಗ್ಗೆ ಹೇಳಿ.**

ಉತ್ತರ ಪ್ರದೇಶ ಮೂಲದ ಒಂದು ವಿಶಿಷ್ಟ ನೃತ್ಯ ಪ್ರಕಾರ ಕಥಕ್. ತಬಲಾ ಲಯದ ಆಧಾರದ ಮೇಲೇ ಹೆಚ್ಚಿನ ನೃತ್ತ, ನೃತ್ಯ, ಅಭಿನಯ ಅವಲಂಬಿಸಿರುವುದೂ ಈ ನೃತ್ಯಪ್ರಕಾರದ ಮತ್ತೊಂದು ವೈಶಿಷ್ಟ್ಯ. ಪಂ. ಬಿರ್ಜು ಮಹಾರಾಜ್ ಹಲವಾರು ಪ್ರತಿಷ್ಠಿತ ವಿಶ್ವವೇದಿಕೆಗಳಲ್ಲಿ ಕಥಕ್ ನೃತ್ಯ ಮಾಡಿದವರು. ಅವರ ಮಾರ್ಗದರ್ಶನ ಪಡೆಯುವ ಅವಕಾಶ ಸಿಕ್ಕಿದ್ದೇ ದೊಡ್ಡ ಸುದೈವ. ಒಮ್ಮೆ ದೆಹಲಿಯಲ್ಲಿ ಅವರ ಗುರುಕುಲದಲ್ಲಿ ಮಹಾರಾಜ್ ಅವರೇ ಕೊರಿಯೋಗ್ರಫಿ ಮಾಡಿದ ಕಥಕ್ ಪ್ರದರ್ಶನದಲ್ಲಿ ನಾನು ಪ್ರಮುಖ ನೃತ್ಯಗಾರ್ತಿಯಾಗಿದ್ದೆ. ಶ್ರೀಕೃಷ್ಣನಿಗೆ ಸಂಬಂಧಿಸಿದ ಆ ನೃತ್ಯದಲ್ಲಿ ರಾಧಾಳ ಪಾತ್ರ ಮಾಡಿದ್ದೆ. ಅವರಿಗೆ ನನ್ನ ಅಭಿನಯ ಬಹಳ ಹಿಡಿಸಿತು. ಕಾರ್ಯಕ್ರಮ ಮುಗಿದ ಬಳಿಕ ಮೆಚ್ಚುಗೆಯ ಮಾತನಾಡಿದರು.

ಮಹಾರಾಜ್ ಅವರೊಂದಿಗೆ ನೃತ್ಯ ಮಾಡುವ ಸದವಕಾಶಗಳೂ ಸಿಕ್ಕಿವೆ. 10 ವರ್ಷಗಳ ಹಿಂದೆ ಪಂ. ಬಿರ್ಜು ಅವರ 70ನೇ ಜನ್ಮದಿನಾಚರಣೆ ಪ್ರಯುಕ್ತ ಅವರ ಜನ್ಮಸ್ಥಳ ಅಲಹಾಬಾದ್‌ನ ಹಾಂಡ್ಯದಲ್ಲಿ ಕಥಕ್ ನೃತ್ಯ ಕಾರ್ಯಕ್ರಮವನ್ನು ಆಯೋಜಿಸಿದ್ದರು. ದೇಶ ವಿದೇಶಗಳ ಅನೇಕ ಪ್ರತಿಭಾನ್ವಿತ ನೃತ್ಯಪಟುಗಳು ಅಲ್ಲಿಗೆ ಬಂದಿದ್ದರು. ಆ ವೇದಿಕೆಯಲ್ಲಿ ನಾನು 'ಚಕ್ಕರ್ಸ್' (70 ಸ್ಪಿನ್ ಇರುವ ವಿಶಿಷ್ಟ ನೃತ್ಯ) ಮಾಡಿದ್ದೆ. 'ಕಾಲಚಕ್ರ' (ಟೈಮ್ ಸೈಕಲ್) ವನ್ನೇ ನಿಖರವಾಗಿ ನಿರ್ಧರಿಸುವ ನೃತ್ಯ ಮಾಡುವುದು ಬಹುದೊಡ್ಡ ಸವಾಲು.

ಇನ್ನೊಮ್ಮೆ ನ್ಯೂಯಾರ್ಕ್‌ನಲ್ಲಿ (ನಾಲ್ಕುವರ್ಷ ಹಿಂದೆ) ನಡೆದ 'ನ್ಯೂಯಾರ್ಕ್ ಡ್ಯಾನ್ಸ್ ಫೆಸ್ಟಿವಲ್'ನಲ್ಲಿ ನನ್ನ ನೃತ್ಯಕ್ಕೆ ಗುರು ಮುರಾರಿ ಅವರೇ ತಬಲಾ ನುಡಿಸಿದ್ದರು. ಇವೆಲ್ಲವೂ ಎಂದೂ ಮರೆಯಲಾರದ ಸವಿನೆನಪಾಗಿ ಉಳಿದಿವೆ. ಇವಲ್ಲದೆ ಬಿರ್ಜು ಮಹಾರಾಜ್ ಅವರ ಸಂಯೋಜನೆಯ ಅನೇಕ ನೃತ್ಯಗಳಲ್ಲಿ ನನಗೆ ಪ್ರಮುಖ ಪಾತ್ರದಲ್ಲೇ ಅಭಿನಯಿಸುವ ಅವಕಾಶ ಸಿಕ್ಕಿದ್ದು ಕೂಡ ನನ್ನ ಸುಯೋಗ.

◆ **ಕಥಕ್ ನೃತ್ಯ ಅಲ್ಲದೆ ಈ ಪ್ರಕಾರದ ವಿವಿಧ ಆಯಾಮಗಳಲ್ಲಿ ಹೇಗೆ ತೊಡಗಿಸಿಕೊಂಡಿದ್ದೀರಿ?**

ಆಸಕ್ತ ಮಕ್ಕಳಿಗೆ ಕಥಕ್ ಹೇಳಿಕೊಡುತ್ತಿದ್ದೇನೆ. ಬೆಂಗಳೂರಿನಲ್ಲಿ, ಅಮೆರಿಕದಲ್ಲಿ ಹಲವಾರು ಮಕ್ಕಳು ಕಲಿಯುತ್ತಿದ್ದಾರೆ. ಕಥಕ್ ಅನ್ನು ಎಷ್ಟು ಸಾಧ್ಯವೋ ಅಷ್ಟು ಹೆಚ್ಚು ಪ್ರಚಾರಕ್ಕೆ ತರುವುದು ಇದರ ಉದ್ದೇಶ. ತಮಿಳುನಾಡಿನ ತಿರುವಣ್ಣಾಮಲೈಯಲ್ಲಿ ಒಂದು ಗ್ರಾಮವನ್ನು ದತ್ತು ಪಡೆದು ಅಲ್ಲಿ ಕಥಕ್‌ನೃತ್ಯ ಕೇಂದ್ರ ಆರಂಭಿಸಿದ್ದೇನೆ. ಅಲ್ಲಿನ ಆಸಕ್ತ 40 ಮಕ್ಕಳಿಗೆ ಉಚಿತವಾಗಿ ನೃತ್ಯ ಹೇಳಿಕೊಡುತ್ತಿದ್ದೇನೆ.

ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿ ಕಥಕ್‌ನಲ್ಲಿ ಕೆಲವು ನೃತ್ಯ ಸಂಯೋಜನೆ ಮಾಡಿದ್ದು, 'ಅಕ್ಕಮಹಾದೇವಿ' ಕುರಿತ ಒಂದು ನೃತ್ಯರೂಪಕಕ್ಕೆ ಸದ್ಯ ಕೊರಿಯೊಗ್ರಫಿ ಮಾಡಿದ್ದೇನೆ.

ಸಿಮ್ರನ್ ಕಥಾನಕವನ್ನು **krshala.com** ನಲ್ಲಿ ನೋಡಬಹುದು. ■

## ಘರಾಣೆಗಳ ವೈವಿಧ್ಯ

ಕಥಕ್ ನೃತ್ಯದ ಮೂಲ ವೇದಗಳ ಕಾಲ. ದಕ್ಷಿಣ ಭಾರತದ ಭರತನಾಟ್ಯದಷ್ಟೇ ಉತ್ತರ ಭಾರತದ ಕಥಕ್ ಜನಪ್ರಿಯ. ವೈವಿಧ್ಯಮಯ ಘರಾಣೆಗಳಲ್ಲಿ ಕಥಕ್ ರೂಪುಗೊಂಡಿದೆ. ಹಿಂದೂಸ್ತಾನಿ ಸಂಗೀತದ ಪಾರಂಪರಿಕ ಜೈಪುರ ಘರಾಣೆ, ಬನಾರಸ್, ಲಖನೌ ಘರಾಣೆಯ ಆಧಾರದಲ್ಲಿ ಕಥಕ್ ಸಂಯೋಜನೆಗೊಂಡಿದೆ. ಜೈಪುರ ಘರಾಣೆಯಲ್ಲಿ ಪಾದದ ಚಲನೆ (ಫೂಟ್ ಮೂವ್‌ಮೆಂಟ್ಸ್) ಮೇಲೆ ನೃತ್ಯ ಕೇಂದ್ರೀಕೃತಗೊಂಡರೆ, ಬನಾರಸ್ ಹಾಗೂ ಲಖನೌ ಘರಾಣೆಯಲ್ಲಿ ಕಥಕ್ ಮುಖದ ಭಾವಾಭಿನಯ, ಲಯದ ಮೇಲೆ ಕೇಂದ್ರೀಕೃತಗೊಂಡಿದೆ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in